ಛಾಯಾ ಭಟ್
ಕಲೆ: ಪ್ರವೀಣ್ ಆಚಾರ್ಯ

# ಹುಸಿ ಗಂಟು

ಬೇರೆಯದೇ ಆದ ವ್ಯಕ್ತಿತ್ವ ತನ್ನೊಳಗೆ ಪ್ರವಹಿಸುತ್ತಿರುವಾಗ ತನ್ನದೇ ನಡೆ, ನಡತೆ, ಭಾವನೆ, ವರ್ತನೆಗಳೆಲ್ಲ ಅಪರಿಚಿತರೊಂದಿಗೆ ಅಚಾನಕ್ಕಾಗಿ ಮುಖಾಮುಖಿಯಾದಂತೆ ಒಮ್ಮೆಲೇ ಕಕ್ಕಾಬಿಕ್ಕಿಯಾಗಿ ಬಿಡುತ್ತವೆ. ಈ ಅನಾಮಿಕತೆಯ ಮುಖವಾಡ ಕಳಚಿಟ್ಟ ಮೇಲೆಯೇ ಮನಸ್ಸಿಗೊಂದು ರೀತಿಯ ಸಮಾಧಾನವೆಂದುಕೊಳ್ಳುತ್ತಾ ಪಾಯಿಜಾಮ ಜುಬ್ಬದೊಳಗೆ ತೂರಿ ಚಡಪಡಿಸುತ್ತಿದ್ದ ದೇಹವನ್ನು ಸಂಭಾಳಿಸಲು ಹರಸಾಹಸಪಡುತ್ತಿದ್ದ ವಿಕ್ರಂ. ಅದೂ ಸಾಲದೆಂಬಂತೆ ಬೆಳಗ್ಗೆ ಕುಡಿದ ನೀರು ಏಸಿಯ ಚಳಿಗೆ ಹೊಟ್ಟೆಯಲ್ಲೊಂದರೆ ಗಳಿಗೆಯೂ ನಿಲ್ಲದೆ ಮೂತ್ರಕೋಶವನ್ನು ಭರ್ತಿ ಮಾಡಿ, ಮೈಕಿನಲ್ಲಿ ಚಿಮ್ಮುತ್ತಿರುವ ಜೀವನದ ವ್ಯಾಖ್ಯಾನಗಳೆಲ್ಲ ಕಿವಿಗಿಳಿದು ಮತ್ತೆಲ್ಲೋ ಒತ್ತರಿಸಿದಂತಾಗತೊಡಗಿತು.

ಒತ್ತಡವನ್ನು ತಡೆಹಿಡಿಯಲಿಕ್ಕಾಗಿ ಎಡಗಾಲಿನ ಮೇಲೆ ಬಲಗಾಲನ್ನೊಮ್ಮೆ, ಬಲಗಾಲಿನ ಮೇಲೆ ಎಡಗಾಲನ್ನೊಮ್ಮೆ ಇಟ್ಟು ಇಕ್ಕಳವಾಗಿ ಒತ್ತಿ ಕುಳಿತುಕೊಳ್ಳಲು ಪ್ರಯತ್ನಿಸಿ ನೋಡಿದ. ಊಹೂಂ... ಬಹಳವೇ ಕಷ್ಟವೆನಿಸಿತು. ತನ್ನನ್ನು ನಿಯಂತ್ರಿಸಿಕೊಳ್ಳುವ ಪ್ರಯತ್ನವೆಲ್ಲ ವ್ಯರ್ಥ ಎನ್ನಿಸತೊಡಗಿದ್ದೇ ಅಭಾಸವೆನ್ನಿಸಿದರೂ ಸರಿಯೇ ಎಂದು ವೇದಿಕೆಯಿಂದೆದ್ದು ಗುಪ್ತಾನಿಗೆ ಈಗಲೇ ಬಂದೆ ಎಂದು ಕಣ್ಸನ್ನೆ ಮಾಡಿ ರೆಸ್ಟ್ ರೂಮ್ ಎಂದು ಬರೆದು ಬಾಣ ಹೂಡಿರುವ ಫಲಕ ಹುಡುಕುತ್ತ ಹೊರನಡೆದ ವಿಕ್ರಂ.

ಅಲ್ಲಿಯೇ ಆಚೀಚೆ ಓಡಾಡಿಕೊಂಡಿದ್ದ ಕಾರ್ಯಕ್ರಮದ ಆಯೋಜಕ ಚಿದಾನಂದ, ‘ಸರ್, ರಾಘವ ಸರ್ ಅವರ ಮಾತು ಮುಗಿದದ್ದೇ ನಿಮ್ಮದೇ ಮಾತು, ನಿಮಗೇ ವೇದಿಕೆ’ ಎಂದು ಸಾಧ್ಯವಾದಷ್ಟು ವಿನಮ್ರವಾಗಿ ಹೊರನಡೆಯುತ್ತಿದ್ದ ವಿಕ್ರಮನನ್ನು ತಡೆಯಲು ಪ್ರಯತ್ನಿಸಿದ.

ರಾಘವನಿಗಿಂತಲೂ ನಾಲ್ಕು ವರ್ಷಕ್ಕೆ ಹಿರಿಯವನಾದ ತನಗೇ ಮೊದಲು ಮಾತನಾಡಲು ಕೊಡಬೇಕಿತ್ತೆನ್ನುವ ಅಪಸ್ವರ ಮನಸ್ಸಿನೊಳಗೆದ್ದಿದ್ದರೂ ಅದನ್ನೀಗ ಸಾಧಿಸಲು ಒಳಗಿನ ಒತ್ತಡ ಬಿಡುತ್ತಿಲ್ಲವಾದ್ದರಿಂದ ಅನಿವಾರ್ಯವಾಗಿ ನಗುವಿನ ಪರದೆಯನ್ನು ಮುಖದ ಮೇಲೆಳೆದುಕೊಂಡು, ‘ಹಾಗೇನಿಲ್ಲ ಮಿಸ್ಟರ್ ಚಿದಾನಂದ್. ಐ ಹಾವ್ ಸಮ್ ಅರ್ಜೆಂಟ್ ವರ್ಕ್. ವಿಲ್ಬೀ ಬ್ಯಾಕ್ ಇನ್ ಟೂ ಮಿನಟ್ಸ್’ ಎಂದು ಬಿರಬಿರನೆ ಹೊರನಡೆದ.

ಸಮಾರಂಭ, ಸನ್ಮಾನ, ಹೊಗಳಿಕೆಗಳೆಲ್ಲ ವಿಕ್ರಮನ ದಿನನಿತ್ಯದ ಜೀವನಕ್ಕೆ ಅತ್ಯವಶ್ಯಕವಾದರೂ ಸಭೆ ಸಮಾರಂಭಗಳಿಗೆ ತೊಡುವ ಪಾಯಿಜಾಮ ಜುಬ್ಬ ಅವನ ನೆಮ್ಮದಿಯನ್ನೆಲ್ಲಾ ಕಸಿಯುತ್ತಿತ್ತು. ಜೊತೆಗೆ ಸಕ್ಕರೆ ಕಾಯಿಲೆಯಿಂದಾಗಿ ಪದೇ ಪದೇ ಮೂತ್ರಕ್ಕೆ ಹೋಗಲು ಪಾಯಿಜಾಮ ತೆಗೆಯುವ ಜಂಜಾಟ ಬೇರೆ.

ಈ ಪಾಯಿಜಾಮದ ಲಾಡಿ ಹೇಗೇ ಬಿಗಿದುಕೊಂಡರೂ ಒಂದೋ ಸಡಿಲವಾಗುತ್ತಿತ್ತು ಇಲ್ಲಾ

